


# ಕೆಟ್ಟವರಿಗೂ ಒಳ್ಳೆಯದಾಗಲಿ

■ ಸಂತೆಬೆನ್ನೂರು ಫೈಜ್ನಟ್ರಾಜ್
ಕಲೆ: ಸಂತೋಷ್ ಸಸಿಹಿತ್ಲು

ಇಡೀ ರಾತ್ರಿ ಶಿಝಾ ಮಲಗಿರಲಿಲ್ಲ. ಮೈ ಕೆಂಡವಾಗಿತ್ತು. ಬರೆಯಲು ಇಟ್ಟುಕೊಂಡಿದ್ದ ಹೋಮ್ ವರ್ಕ್ ಹಾಳೆ, ಪೆನ್ಸಿಲ್ಲು, ಬಣ್ಣದ ಕಾಗದ, ಆ ಕಾಗದದ ತುದಿಗೆ ಅರ್ಧ ಬರೆದಿದ್ದ ಹುಲಿ ಮತ್ತು ಹಸುವಿನ ಚಿತ್ರ ಅಲ್ಲೇ ಒದ್ದಾಡುತ್ತಿದ್ದವು ನೀರಿಗಾಗಿ ಅಮ್ಮ ರೇಷ್ಮಾಳಿಗೂ ನಿದ್ದೆ ಮಾಡಲು ಕೊಡದೇ ನೀರು ಕುಡಿದು ರಗ್ ಹೊದ್ದು ಕೂರುವುದು, ಮಲಗುವುದು ಮಾಡುತ್ತಿದ್ದಳು. ಯಾವಾಗಲೂ ಮನೆಯಲ್ಲಿ ತಂದಿಡುತ್ತಿದ್ದ ಸಿರಪ್ ಹಾಕಿ ಮಗ್ಗುಲಾಗಿ ಮಲಗಿದರೂ ಮಗಳ ಮೈ ಬಿಸಿ ಇವಳಿಗೂ ತಾಕಿ ಅವಳ ಜೊತೆಯಲ್ಲಿ ಜಾಗರಣೆ ಮಾಡಿಬಿಟ್ಟಳು. ಯಾಕೆ ಒಮ್ಮೆಗೆ ಈ ರೀತಿ ಜ್ವರ? ಶಾಲೆಲೇನಾದರೂ ಆಯಿತಾ... ಮೇಷ್ಟ್ರು ಹೊಡೆದರಾ... ಶಿಝಾ ತಾಯಿ ರೇಷ್ಮಾ ವಿಚಾರಿಸಿದಾಗ ಶಾಲೆಯಲ್ಲಿ ನಡೆದ ಕತೆ ಹೇಳಿದಳು... ಎರಡನೇ ತರಗತಿ ಓದುವ ಶಿಝಾ ಶಾಲೆಯಲ್ಲಿ ಮಂಜಪ್ಪ ಮೇಷ್ಟ್ರು ಎಲ್ಲ ಮಕ್ಕಳಿಗೂ ಬಹಳ ಅಚ್ಚುಮೆಚ್ಚು. ಪಾಠದ ಜೊತೆಯಲ್ಲಿ ಆಟ, ಆಟದ ಜೊತೆ ಜೊತೆಗೆ ಬಾಳಿನ ನೀತಿಯೂ ಸೇರಿಸಿ ಹಾಡು, ಒಗಟು, ಗಾದೆ, ನುಡಿಗಟ್ಟುಗಳ ಪರಿಚಯದೊಂದಿಗೆ ಕನ್ನಡದ ಸೊಗಡನ್ನೂ ಹಂಚುತ್ತಿದ್ದರು.

ಅಂದು ಆಗಿದ್ದಿಷ್ಟೇ....

ಖಂಡವಿದೆಕೋ ಮಾಂಸವಿದೆಕೋ ಗುಂಡಿಗೆಯ ಬಿಸಿ ರಕ್ತವಿದೆಕೋ ಖೂಳವ್ಯಾಘ್ರನೆ ನೀನಿದೆಲ್ಲವ ಉಂಡು ಸಂತಸದಿಂದಿರು...

ಮಧ್ಯಾಹ್ನದ ಎರಡನೇ ಪಿರಿಯಡಿಗೆ ನೀತಿ ಶಿಕ್ಷಣ ತರಗತಿ ಇತ್ತು. ಮಂಜಪ್ಪ ಸರ್ ಗೋವಿನ ಹಾಡು ವಿವರಿಸುತ್ತಿದ್ದರು. ಪಠ್ಯಕ್ಕೆ ಈ ಪದ್ಯ ಇರಲಿಲ್ಲ. ಆದರೆ ಮಕ್ಕಳಿಗೆ ಜನಪದ ಅರಿವಾಗಲೆಂದು ವಾರಕ್ಕೆ ಎರಡು ಅವಧಿ ಪಂಚತಂತ್ರದ ಕಥೆಗಳು, ಅರೇಬಿಯನ್ ನೈಟ್ಸ್ ಕಥೆ, ಚಂದಮಾಮ, ಬಾಲ ಮಿತ್ರ ಕಥೆಗಳನ್ನು ಹೇಳ್ತಾ, ಹಾಡ್ತಾ ಅಭಿನಯಿಸ್ತಾ ಕಣ್ಣಿಗೆ ಕಟ್ಟುವಂತೆ ಹೇಳುತ್ತಿದ್ದರು. ಏಕಪಾತ್ರಾಭಿನಯ ಮಾಡುವುದರಲ್ಲೂ ಹೆಸರಾಗಿದ್ದರು ಮಂಜಪ್ಪ... ಹಸಿದ ಹುಲಿ ಪುಣ್ಯಕೋಟಿ ಎಂಬ ಹಸುನ ಅಡ್ಡಗಟ್ಟಿ ತಿಂತೀನಿ ಅಂತ ಆರ್ಭಟಿಸಿದಾಗ ಮನೆಲಿರೋ ಕರುಗೆ ಹಾಲು ಕುಡಿಸಿ ಬರ್ತೀನಿಯಂತು ಹಸು. ಮೊದ ಮೊದಲು ಒಪ್ಪದ ಹುಲಿ, ಹಸುವಿನ ಆಣೆ ಪ್ರಮಾಣಗಳಿಗೆ ಮನಸೋತು ಕಳಿಸಿ ಕೊಡುತ್ತದೆ. ಕೊಟ್ಟ ಮಾತು ಉಳಿಸಿಕೊಳ್ಳಲು ಪುಣ್ಯಕೋಟಿ ಹಸು ಮರಳಿ ಹುಲಿ ಎದುರು ನಿಂತು ಈ ಮೇಲಿನಂತೆ ಹೇಳುತ್ತದೆ ಎಂದಾಗ ಆ ತರಗತಿಯ ಮೂವತ್ತೂ ಮಕ್ಕಳು ಗೊಳೋ ಎಂದು ಅತ್ತಿದ್ದರು. ಮಂಜಪ್ಪ ಸರ್ ಕೂಡ ಕಣ್ಣು ತುಂಬಿಕೊಂಡೇ ಹಾಡುತ್ತಾ ತಾವೇ ಹುಲಿ, ತಾವೇ ಹಸು ಎಂಬಂತೆ ಹೇಳುತ್ತಿದ್ದರು.ಎಲ್ಲಾ ಮಕ್ಕಳಿಗೂ ಕುತೂಹಲ ಹಸು ಏನಾಗುತ್ತೋ, ಸತ್ತರೆ ಮನೆಯಲ್ಲಿನ ಕರುವಿನ ಗತಿ? ಹುಲಿ ತಿಂದುಬಿಡುತ್ತಾ? ಹಾಗೇ ಬಿಡುತ್ತಾ... ಮಕ್ಕಳಿಗೆ ಢವಢವ.

‘ಎನ್ನ ಒಡ ಹುಟ್ಟಕ್ಕ ನೀನು/ ನಿನ್ನ ಕೊಂದು ನಾ ಏನು ಪಡೆವೆನು/ ಎನ್ನುತಾ ಹುಲಿ ಹಾರಿ ನೆಗೆದು/ ತನ್ನ ಪ್ರಾಣವ ಬಿಟ್ಟಿತು...’ ಎಂದು ಮಂಜಪ್ಪ ಸರ್ ಹೇಳಿದ್ದೇ ತಡ....ಇಡೀ ಶಾಲೆ ಹೊಯ್...ಅನ್ನುತ್ತಾ ಚಪ್ಪಾಳೆ ಹಾಕಿ... ಕಿರ್ ಅಂತ ಕೂಗಿ ಸಂತೋಷ ವ್ಯಕ್ತಪಡಿಸಿದರು... ಈ ಶಿಝಾ ಹೊರತಾಗಿ!

ಇಡೀ ತರಗತಿ ಹುಲಿ ಸತ್ತಿತಂತೆ ಅಂತ ಖುಷಿ ಪಟ್ರೆ ಶಿಝಾಳ ಮೌನ ಮಂಜಪ್ಪ ಸರ್‌ಗೆ ಅಚ್ಚರಿ ಮೂಡಿಸಿತು.

‘ಯಾಕೋ ಕಂದ. ಆ ಕತೆ ಇಷ್ಟ ಆಗಲಿಲ್ವ?’ ಅಂದರು.

ಶಿಝಾ ಮಾತು ಮರೆತವಳಂತೆ ಕೂತಿದ್ದಳು. ಹತ್ತಿರ ಬಂದು ಭುಜ ಅಲ್ಲಾಡಿಸಿ ಮತ್ತೆ ಅದೇ ಪ್ರಶ್ನೆ ಕೇಳಿದರು.